

'Bharat Ratna'
**Sir M. Visvesvaraya**
Founder

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ

**FEDERATION OF KARNATAKA CHAMBERS OF COMMERCE AND INDUSTRY**

Estd. 1916



# VISION STATEMENT

## 2025-26

A New Dawn . A Bold Horizon



"This milestone is not merely a historical breakthrough, but a bridge towards lasting transformation - a reflection of our collective commitment to collaboration, inclusion, and shared aspiration."

**Uma Reddy**
President, FKCCI

# 1 Million Entrepreneurs One Vision

Imagine the future where Karnataka creates one million new entrepreneurs - a movement, not a number. Each of these entrepreneurs can be empowered through active facilitation* and awareness by FKCCI. At an average of say ₹2 lakh in funding support each, this translates into ₹20,000 crore of MSME investment, fuelling businesses across districts, towns and tier 2 & tier 3 cities. FKCCI's ambitious goal is to handhold, mentor and mobilize this wave of new entrepreneurs. The Chamber will be their launchpad - connecting them to resources, funding, networks and markets. From small traders with big dreams to innovators building the next unicorn, FKCCI will be the ecosystem where entrepreneurship thrives. This is not just about economics; it is about dignity, empowerment and the creation of a million success stories that redefine Karnataka's future.

Every Kannadiga carries a piece of home in their heart - no matter where in the world they live. FKCCI's mission under **"Kannada Hemme"** is to channel that pride into purposeful action. We will reach out to NRIs and overseas Kannadigas, inviting them to invest, relocate, and build in Karnataka. We will handhold them at every step - from navigating policies to identifying opportunities, from setting up operations to accessing networks. This is about more than just remittances or returns; it is about roots. It is about bringing back not just money but ideas, innovation, and international exposure to the soil of Karnataka. Through 'Kannada Hemme', FKCCI will create a bridge of pride, and purpose, making Karnataka not just a state to be proud of, but a state impossible to stay away from.



# The future is not waited for - it is built and FKCCI will be its architect.

## GLOBAL OUTLOOK

From Bengaluru - the world's start up and knowledge capital - FKCCI will take its brand global. By forging international alliance, hosting B2B and showcasing Karnataka as a preferred invest hub and promoting tourism, we will place our entrepreneurs on the global map, making FKCCI a trusted voice in cross-border commerce and innovation.

## POLICY ADVOCACY

FKCCI envisions a robust industrial ecosystem where progressive policies empower businesses, especially MSMEs, to thrive. By championing industry-friendly reforms, facilitating dialogue between stakeholders, and driving inclusive policy advocacy, FKCCI strives to be the catalyst for sustainable economic growth and a vibrant entrepreneurial landscape across Karnataka.

In continuation of this effort, FKCCI also ensures active representation on matters related to direct and indirect taxes, making taxation advocacy a continuous and integral part of its engagement with policymakers.

## Sir M.V. ECONOMIC RESEARCH CENTRE

FKCCI's exclusive research centre conducts applied research in trade, commerce, industry, services, and on economic policy. With a focus on policy advocacy at district, state, national, and regional levels, it promotes global outreach and collaboration. Following the triple-helix model, the centre brings together government, industry and academia to drive pragmatic and accelerated economic growth.

It also houses a Digital Knowledge Library and is actively advancing digitisation initiatives to enhance research accessibility and data-driven insights. Going forward, there will be a strong focus on sectoral research to generate in-depth analyses, evidence-based recommendations and actionable strategies across key industries.

## SKILL DEVELOPMENT TRAINING WITH TECHNOLOGY FOCUS

**Technology is no longer a choice; it is survival.** FKCCI will empower members with access to AI, blockchain, data analytics and Industry 4.0 solutions, through workshops and partnerships, so that the smallest enterprise becomes future-ready, globally competitive and digitally empowered.

**MANTHAN, an annual Business Plan Presentation Competition,** is one of the flagship events of FKCCI. In its 18th edition, MANTHAN is aimed at encouraging young minds to develop the entrepreneurial spirit. Through this award program, MANTHAN reaches out to all graduate and post graduate students from Institution's all over Karnataka.

This year, FKCCI plans to recognize students from Government Colleges as part of the expanded Manthan Program, under a special recognition initiative.

FKCCI will initiate and develop a road map for implementation of **adopting government colleges across Karnataka** to provide industry relevant training, mentoring, incubation setup and foster entrepreneurship. This initiative bridges academia with industry creating a pool of future ready skilled youth.

## FLAGSHIP EVENTS

Our events will become engines of influence.

i. **Trade Shows**
   - MSME Conclave
   - CSR & Sustainability
   - Agri Tech Expo
   - Tourism

ii. **Dialogues and Conversation**
   - Founders Day Memorial Lectures
   - Sir M V Dialogues

iii. **Awards & Recognitions**
   - Sir M. Visvesvaraya Memorial Award
   - Export Excellence Awards
   - MSME Awards
   - Women Entrepreneurs Awards

iv. **International Trade Delegations & B2B Sessions**

will be reinvented as platforms of ideas, collaborations and breakthroughs - transforming every gathering into a landmark moment that propels members, businesses, and Karnataka itself forward.

## MEMBERS SERVICES

Members are FKCCI's heartbeat. We will expand advocacy, create responsive grievance redressal, and strengthen mentoring networks. From policy support to business guidance, FKCCI will serve as the trusted partner in every entrepreneur's journey - ensuring that membership is not just affiliation, but empowerment, protection, and a passport to limitless opportunities providing Mobile App and B2B Vendor Development.

FKCCI organizes Members Day, an exclusive event for its valued members. FKCCI will strengthen youth and start-up participation through special membership drives and innovation-focused engagement platforms.

## WOMEN ENTREPRENEURS

Empowering women entrepreneurs is nation-building in its purest form. By championing women in manufacturing, trade and services, FKCCI will help expand GDP, diversify industries and foster inclusivity. Dedicated platforms, access to finance, and mentorship will ensure women lead from the front - creating an economy that is both prosperous and socially just. **Every year, FKCCI will proudly organize International Women's Entrepreneurs day and International Women's Day Celebrations, recognizing the invaluable contributions of women in various spheres.**

## BUILDING TRUST THROUGH CERTIFIED EXCELLENCE

**FKCCI is committed to adopting internationally benchmarked ISO processes** to ensure transparency, efficiency, and service excellence. By embedding ISO standards in our operations, we aim to strengthen governance, enhance member satisfaction, and position FKCCI as a globally trusted chamber of commerce.

As a Federation, **FKCCI will also work closely with all District Chambers and Sectoral Associations** to achieve its collective objectives, foster regional engagement, and ensure that the benefits of institutional excellence and best practices reach every part of Karnataka.

**Together, we will transform aspiration into achievement and make FKCCI the pride of Karnataka, India and the World.**

> As I take charge, I carry the hopes of history and the promise of the future. Together, we will make **FKCCI** not just Karnataka's pride, but the world's benchmark for **inclusive, innovative** and **impactful outcomes.**
>
> **Uma Reddy**
> President, FKCCI

# FKCCI - The Catalyst for a $1 TRILLION KARNATAKA

Karnataka's vision of a $1 trillion economy can only be realized with FKCCI at the helm. Why? Because FKCCI represents the full spectrum of business, trade, industry and services with such depth and authenticity. FKCCI is the voice of the state's business community. As the umbrella body of MSMEs, it connects the aspirations of young entrepreneurs, fostering ambition, mindset change and transformative growth.

Government recognizes FKCCI's unmatched role as the bridge between policy and practice, between vision and execution. We are the nerve centre where entrepreneurs meet opportunity, where regulation meets reality and where dreams find direction. For Karnataka to leapfrog into the $1 trillion league, FKCCI must be entrusted as a key stake holder in this historic mission there by supporting India's runway for Viksit Bharat 2047 - a $ 4 Trillion economy .

**FKCCI stands as a powerhouse of Karnataka's economic growth and industrial strength.** FKCCI is not just a chamber - it is an economic force. With over 5000 direct Members and two lakh indirect Members, each investing an estimated average of ₹25 lakh/year, the collective outlay stands at an astonishing ₹50,000 crores. This is not merely capital deployed - it is capital actively working to power Karnataka's industries, trade, and services. Beyond numbers, FKCCI is a job creator on a scale rivalling the biggest corporations in India, yet rooted firmly in the MSME sector. Every small unit, every trader, every entrepreneur contributes to this formidable ecosystem. This is the unseen economy, the silent workforce, the relentless engine that never stops. FKCCI embodies that strength - resilient, dynamic and future-ready. **FKCCI is the heart of Karnataka's economic pulse.**



Federation House, K.G. Road
Bengaluru - 560 009
T: 080 22262355/56 | E: president@fkcci.in
W: www.fkcci.org



‘ಭಾರತ ರತ್ನ’
ಸರ್ ಎಂ. ವಿಶ್ವೇಶ್ವರಯ್ಯ
ಸಂಸ್ಥಾಪಕರು

**ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ**

**FEDERATION OF KARNATAKA CHAMBERS OF COMMERCE AND INDUSTRY**

Estd. 1916



# ವಿಷನ್ ಸ್ಟೇಟ್‌ಮೆಂಟ್

## 2025-26

ಹೊಸ ಪ್ರಭಾತ • ಧೈರ್ಯದ ಗುರಿ

“ಈ ಮೈಲಿಗಲ್ಲು ಕೇವಲ ಒಂದು ಐತಿಹಾಸಿಕ ಪ್ರಗತಿಯಲ್ಲ, ಬದಲಾಗಿ ಶಾಶ್ವತ ಪರಿವರ್ತನೆಯ ಸೇತುವೆಯಾಗಿದೆ. ಇದೆಲ್ಲವೂ ಸಹಯೋಗ, ಸೇರ್ಪಡೆ ಮತ್ತು ಹಂಚಿಕೆಯ ಆಕಾಂಕ್ಷೆಗೆ ನಮ್ಮ ಸಾಮೂಹಿಕ ಬದ್ಧತೆಯ ಪ್ರತಿಬಿಂಬ.”

**ಉಮಾ ರೆಡ್ಡಿ**

ಅಧ್ಯಕ್ಷೆ, ಎಫ್.ಕೆ.ಸಿ.ಸಿ.ಐ.



# 1 ದಶಲಕ್ಷ ಉದ್ಯಮಿಗಳು ಒಂದು ನೋಟ

ಕರ್ನಾಟಕವು ಒಂದು ದಶಲಕ್ಷ ಹೊಸ ಉದ್ಯಮಿಗಳನ್ನು ಭವಿಷ್ಯದಲ್ಲಿ ಸೃಷ್ಟಿಸುವುದನ್ನು ಊಹಿಸಿ! ಅದು ಒಂದು ಚಳುವಳಿ, ಸಂಖ್ಯೆಯಲ್ಲ. ಈ ಪ್ರತೀ ಉದ್ಯಮಿಗಳನ್ನು ಎಫ್.ಕೆ.ಸಿ.ಸಿ.ಐ.ನ ಸಕ್ರಿಯ ಸೌಲಭ್ಯ ಮತ್ತು ಜಾಗೃತಿಯ ಮೂಲಕ ಸಬಲೀಕರಣಗೊಳಿಸಬಹುದು. ಹೇಳಬೇಕೆಂದರೆ, ಪ್ರತಿಯೊಬ್ಬರಿಗೂ ಸರಾಸರಿ 2 ಲಕ್ಷ ರೂಪಾಯಿಗಳ ಹಣಕಾಸು ಬೆಂಬಲವನ್ನು ನೀಡಿದಲ್ಲಿ, ಇದು 20,000 ಕೋಟಿ ರೂಪಾಯಿಗಳಷ್ಟು ಹೂಡಿಕೆಯಾಗಿ ಪರಿವರ್ತನೆಗೊಂಡು, ಜಿಲ್ಲೆಗಳು, ಪಟ್ಟಣಗಳು ಹಾಗೂ 2 ಮತ್ತು 3ನೇ ಶ್ರೇಣಿಯ ನಗರಗಳಲ್ಲಿ ವ್ಯಾಪಾರ ಮತ್ತು ವ್ಯವಹಾರಗಳನ್ನು ಉತ್ತೇಜಿಸುತ್ತದೆ. ಎಫ್.ಕೆ.ಸಿ.ಸಿ.ಐ.ನ ಮಹತ್ವಾಕಾಂಕ್ಷೆಯ ಗುರಿಯು ಹೊಸ ಉದ್ಯಮಿಗಳ ಅಲೆಯನ್ನು ಹಿಡಿದಿಟ್ಟುಕೊಂಡು, ಸೂಕ್ತ ಮಾರ್ಗದರ್ಶನ ಮಾಡುವುದು ಹಾಗೂ ಸಜ್ಜುಗೊಳಿಸುವುದೇ ಆಗಿದೆ. ಸಂಸ್ಥೆಯು ಅವರ ಲಾಂಚ್‌ಪ್ಯಾಡ್‌ನಂತೆ ವರ್ತಿಸಿ, ಅವರು ಸಂಪನ್ಮೂಲಗಳು, ಹಣಕಾಸು, ನೆಟ್‌ವರ್ಕ್‌ಗಳು ಮತ್ತು ಮಾರುಕಟ್ಟೆಗಳನ್ನು ಸಂಪರ್ಕಿಸಲು ಅವಕಾಶ ಮಾಡಿಕೊಡುತ್ತದೆ. ದೊಡ್ಡ ಕನಸುಗಳನ್ನು ಹೊಂದಿರುವ ಸಣ್ಣ ವ್ಯಾಪಾರಿಗಳಿಂದ ಹಿಡಿದು ಮುಂದಿನ ಯುನಿಕಾರ್ನ್‌ನ್ನು ನಿರ್ಮಿಸುವ ನಾವೀನ್ಯಕಾರರವರೆಗೆ, ಎಲ್ಲರನ್ನೂ ಒಗ್ಗೂಡಿಸಿ, ಉದ್ಯಮಶೀಲತೆಯನ್ನು ಅಭಿವೃದ್ಧಿ ಪಡಿಸುವ ಒಂದು ಪರಿಸರ ವ್ಯವಸ್ಥೆಯಾಗಿ ಎಫ್.ಕೆ.ಸಿ.ಸಿ.ಐ. ಕಾರ್ಯನಿರ್ವಹಿಸುತ್ತದೆ. ಇದು ಕೇವಲ ಆರ್ಥಿಕತೆ ಮಾತ್ರವೇ ಅಲ್ಲದೇ, ಘನತೆ, ಸಬಲೀಕರಣ ಮತ್ತು ಕರ್ನಾಟಕದ ಭವಿಷ್ಯವನ್ನು ಮರು ವ್ಯಾಖ್ಯಾನಿಸುವ ಒಂದು ದಶಲಕ್ಷ ಯಶಸ್ಸಿನ ಕಥೆಗಳ ಸೃಷ್ಟಿಯಾಗಿದೆ.

ಪ್ರತಿಯೊಬ್ಬ ಕನ್ನಡಿಗನೂ ಜಗತ್ತಿನಲ್ಲಿ ಎಲ್ಲಿಯೇ ವಾಸಿಸುತ್ತಿದ್ದರೂ, ತನ್ನ ಹೃದಯದಲ್ಲಿ ಒಂದು ಮನೆಯನ್ನು ಹೊಂದಿರುತ್ತಾನೆ. ಎಫ್.ಕೆ.ಸಿ.ಸಿ.ಐ.ನ ಧ್ಯೇಯಗಳಲ್ಲೊಂದಾದ **'ಕನ್ನಡ ಹೆಮ್ಮೆ'**ಯನ್ನು ಪರಿಪೂರ್ಣ ಮತ್ತು ಉದ್ದೇಶಪೂರ್ವಕ ಹೆಮ್ಮೆಯಾಗಿ ಕಾರ್ಯಗತಗೊಳಿಸುವುದು. ನಾವು ಎನ್.ಆರ್.ಐ.ಗಳು ಮತ್ತು ವಿದೇಶಿ ಕನ್ನಡಿಗರನ್ನು ಸಂಪರ್ಕಿಸಿ, ಅವರು ಕರ್ನಾಟಕದಲ್ಲಿ ಹೂಡಿಕೆ ಮಾಡಲು, ಸ್ಥಳಾಂತರಗೊಳ್ಳಲು ಮತ್ತು ರಾಜ್ಯದಲ್ಲಿಯೇ ನಿರ್ಮಿಸಲು ಆಹ್ವಾನಿಸುತ್ತೇವೆ. ಕೈಗಾರಿಕಾ ನೀತಿಗಳನ್ನು ತಿಳಿಸಿಕೊಡುವುದರಿಂದ ಹಿಡಿದು ಅವಕಾಶಗಳನ್ನು ಗುರುತಿಸುವವರೆಗೆ ಹಾಗೂ ಕೈಗಾರಿಕೆಗಳನ್ನು ಸ್ಥಾಪಿಸುವುದರಿಂದ ಹಿಡಿದು ಸಂಪರ್ಕ ಜಾಲವನ್ನು ಒದಗಿಸುವವರೆಗೆ, ಪ್ರತಿ ಹಂತದಲ್ಲೂ ನಾವು ಅವರಿಗೆ ಮಾರ್ಗದರ್ಶನ ನೀಡುತ್ತೇವೆ. ಈ ಪ್ರಕ್ರಿಯೆಯು ಹಣದ ರವಾನೆ ಅಥವಾ ಆದಾಯವನ್ನು ಪಡೆಯುವುದಕ್ಕಿಂತ ಹೆಚ್ಚಿನದ್ದಾಗಿದ್ದು, ಇದು ನಮ್ಮ ಮೂಲಬೇರುಗಳಲ್ಲಿಯೇ ಇದೆ. ಇದು ಕೇವಲ ಹಣವನ್ನು ಮಾತ್ರವಲ್ಲದೇ, ಆಲೋಚನೆಗಳು, ನಾವೀನ್ಯತೆ ಮತ್ತು ಅಂತರರಾಷ್ಟ್ರೀಯ ಮಾನ್ಯತೆಯನ್ನು ಕರ್ನಾಟಕದ ಮಣ್ಣಿಗೆ ಮರಳಿ ತಂದುಕೊಡುತ್ತದೆ. ಎಫ್.ಕೆ.ಸಿ.ಸಿ.ಐ. ಸಂಸ್ಥೆಯು 'ಕನ್ನಡ ಹೆಮ್ಮೆ'ಯ ಮುಖೇನ, ಹೆಮ್ಮೆ ಮತ್ತು ಉದ್ದೇಶದ ಸೇತುವೆಯನ್ನು ನಿರ್ಮಿಸಿ, ಕರ್ನಾಟಕವನ್ನು ಹೆಮ್ಮೆಪಡುವ ರಾಜ್ಯವನ್ನಾಗಿ ಮಾತ್ರವಲ್ಲದೇ, ದೂರವಿಡಲು ಅಸಾಧ್ಯವಾದ ರಾಜ್ಯವನ್ನಾಗಿ ಮಾಡುತ್ತದೆ.



ಕನ್ನಡ ಹೆಮ್ಮೆ ▪ ಜಾಗತಿಕ ಹೆಮ್ಮೆ

# ಭವಿಷ್ಯವನ್ನು ಕಾಯುವುದಿಲ್ಲ – ಅದನ್ನು ನಿರ್ಮಿಸಲಾಗುತ್ತದೆ ಮತ್ತು ಅದರ ಶಿಲ್ಪಿ ಎಫ್.ಕೆ.ಸಿ.ಸಿ.ಐ. ಆಗಿರುತ್ತದೆ.

## ಜಾಗತಿಕ ದೃಷ್ಟಿಕೋನ

ಬೆಂಗಳೂರು – ವಿಶ್ವದ ಸ್ಟಾರ್ಟ್-ಅಪ್ ಮತ್ತು ಜ್ಞಾನ ರಾಜಧಾನಿಯಿಂದ, ಎಫ್.ಕೆ.ಸಿ.ಸಿ.ಐ. ತನ್ನ ಬ್ರಾಂಡ್ ಅನ್ನು ಜಾಗತಿಕ ಮಟ್ಟಕ್ಕೆ ತೆಗೆದುಕೊಂಡು ಹೋಗಲಿದೆ. ಅಂತರರಾಷ್ಟ್ರೀಯ ಮೈತ್ರಿಗಳನ್ನು ನಿರ್ಮಿಸಿ, ಬಿ2ಬಿ ಕಾರ್ಯಕ್ರಮಗಳನ್ನು ಆಯೋಜಿಸಿ, ಮತ್ತು ಕರ್ನಾಟಕವನ್ನು ಪ್ರಾಮುಖ್ಯ ಹೂಡಿಕೆ ಮತ್ತು ಪ್ರವಾಸೋದ್ಯಮ ಕೇಂದ್ರವಾಗಿ ಪ್ರದರ್ಶಿಸುವ ಮೂಲಕ, ನಮ್ಮ ಉದ್ಯಮಿಗಳನ್ನು ಜಾಗತಿಕ ನಕ್ಷೆಯಲ್ಲಿ ಸ್ಥಾಪಿಸುತ್ತೇವೆ. ಇದು ಎಫ್.ಕೆ.ಸಿ.ಸಿ.ಐ.ಯನ್ನು ಅಂತರಸೀಮಾ ವ್ಯಾಪಾರ ಮತ್ತು ನಾವೀನ್ಯತೆಯ ವಿಶ್ವಾಸಾರ್ಹ ಧ್ವನಿಯನ್ನಾಗಿ ಮಾಡುತ್ತದೆ.

## ನೀತಿ ವಕಾಲತ್ತು

ಎಫ್.ಕೆ.ಸಿ.ಸಿ.ಐ. ಪ್ರಗತಿಪರ ನೀತಿಗಳು ವ್ಯವಹಾರಗಳನ್ನು ವಿಶೇಷವಾಗಿ ಎಂ.ಎಸ್.ಎಂ.ಇ.ಗಳನ್ನು ಶಕ್ತಿಪಡಿಸುವ ಬಲವಾದ ಕೈಗಾರಿಕಾ ಪರಿಸರವನ್ನು ಕಲ್ಪಿಸುತ್ತದೆ. ಉದ್ಯಮ ಸ್ನೇಹಿ ಸುಧಾರಣೆಗಳನ್ನು ಪ್ರೋತ್ಸಾಹಿಸುವ ಮೂಲಕ, ಹಿತಾಸಕ್ತಿಗಳ ನಡುವಿನ ಸಂವಾದವನ್ನು ಉತ್ತೇಜಿಸಿ, ಮತ್ತು ಸಮಾವೇಶಿತ ನೀತಿ ವಕಾಲತೆಯನ್ನು ಮುಂದಿನ ಸಾಲಿನಲ್ಲಿ ನಿಂತು ನಡೆಸುವ ಮೂಲಕ, ಎಫ್.ಕೆ.ಸಿ.ಸಿ.ಐ. ಕರ್ನಾಟಕದಾದ್ಯಂತ ಶಾಶ್ವತ ಆರ್ಥಿಕ ವೃದ್ಧಿಗೆ ಮತ್ತು ಜೀವಂತ ಉದ್ಯಮಶೀಲ ಪರಿಸರಕ್ಕೆ ಚಾಲಕವಾಗುತ್ತದೆ.

ಈ ಪ್ರಯತ್ನದ ಮುಂದುವರಿಕೆಯಲ್ಲಿ, ಎಫ್.ಕೆ.ಸಿ.ಸಿ.ಐ. ನೇರ ಮತ್ತು ಪರೋಕ್ಷ ತೆರಿಗೆಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಸಕ್ರಿಯ ಪ್ರಾತಿನಿಧ್ಯವನ್ನು ಖಚಿತಪಡಿಸುತ್ತದೆ. ಹಾಗೆಯೇ ತೆರಿಗೆ ವಕಾಲತ್ತು ನೀತಿ ರಚನಕಾರರೊಂದಿಗೆ ಸಂಪರ್ಕದಲ್ಲಿದ್ದು, ಅದರ ನಿರಂತರ ಮತ್ತು ಅವಿಭಾಜ್ಯ ಅಂಗವಾಗಿದೆ.

## ಸರ್ ಎಂ.ವಿ. ಆರ್ಥಿಕ ಸಂಶೋಧನಾ ಕೇಂದ್ರ

ಎಫ್.ಕೆ.ಸಿ.ಸಿ.ಐ.ಯ ವಿಶಿಷ್ಟ ಸಂಶೋಧನಾ ಕೇಂದ್ರವು ವ್ಯಾಪಾರ, ವಾಣಿಜ್ಯ, ಕೈಗಾರಿಕೆ, ಸೇವೆಗಳು ಮತ್ತು ಆರ್ಥಿಕ ನೀತಿಗಳ ಕುರಿತಾಗಿ ಜಿಲ್ಲಾ, ರಾಜ್ಯ, ರಾಷ್ಟ್ರೀಯ ಮತ್ತು ಪ್ರಾದೇಶಿಕ ಮಟ್ಟದಲ್ಲಿ ಸಂಶೋಧನೆಗಳನ್ನು ನಡೆಸುತ್ತದೆ. ನೀತಿನಿರ್ಮಾಣ ಸಂಶೋಧನೆಗೆ ಒತ್ತು ನೀಡುವ ಮೂಲಕ, ಎಫ್.ಕೆ.ಸಿ.ಸಿ.ಐ. ಜಾಗತಿಕ ದೃಷ್ಟಿ ಮತ್ತು ಸಹಕಾರವನ್ನು ಉತ್ತೇಜಿಸುತ್ತದೆ. ತ್ರಿಭುಜ ಮಾದರಿಯಂತೆ (ಟ್ರಿಪಲ್-ಹೆಲಿಕ್ಸ್), ಈ ಕೇಂದ್ರವು ಸರ್ಕಾರ, ಕೈಗಾರಿಕೆ ಮತ್ತು ಅಕಾಡೆಮಿಯ ನಡುವೆ ಸಹಕಾರವನ್ನು ಬಲಪಡಿಸಿ ವೇಗವಾದ ಆರ್ಥಿಕ ವೃದ್ಧಿಗೆ ದಾರಿ ಮಾಡಿಕೊಡುತ್ತದೆ.

ಈ ಕೇಂದ್ರವು ಡಿಜಿಟಲ್ ಜ್ಞಾನ ಗ್ರಂಥಾಲಯವನ್ನು ಹೊಂದಿದ್ದು, ಸಂಶೋಧನಾ ಒಳಗೊಳ್ಳುವಿಕೆ ಮತ್ತು ಡೇಟಾ-ಚಾಲಿತ ಆಳವಾದ ಜ್ಞಾನವನ್ನು ಹೆಚ್ಚಿಸಲು ಡಿಜಿಟಲೀಕರಣ ಉಪಕ್ರಮಗಳನ್ನು ಸಕ್ರಿಯವಾಗಿ ಮುನ್ನಡೆಸುತ್ತಿದೆ. ಮುಂದುವರಿದಂತೆ, ಪ್ರಮುಖ ಕೈಗಾರಿಕೆಗಳಲ್ಲಿ ಆಳವಾದ ವಿಶ್ಲೇಷಣೆಗಳು, ಪುರಾವೆ ಆಧಾರಿತ ಶಿಫಾರಸುಗಳು ಮತ್ತು ಕಾರ್ಯಸಾಧ್ಯ ತಂತ್ರಗಳನ್ನು ಉತ್ಪಾದಿಸಲು ವಲಯ ಸಂಶೋಧನೆಯ ಮೇಲೆ ಗಮನವನ್ನು ಕೇಂದ್ರೀಕರಿಸಿದೆ.

## ತಂತ್ರಜ್ಞಾನ ಕೇಂದ್ರೀಕೃತ ಕೌಶಲ್ಯಾಭಿವೃದ್ಧಿ ತರಬೇತಿ

**ತಂತ್ರಜ್ಞಾನ ಈಗ ಆಯ್ಕೆಯ ವಿಷಯವಲ್ಲ – ಅದು ಬದುಕುಳಿಯುವ ಶಕ್ತಿ.**

ಎಫ್.ಕೆ.ಸಿ.ಸಿ.ಐ. ತನ್ನ ಸದಸ್ಯರಿಗೆ ಕೃತಕ ಬುದ್ಧಿಮತ್ತೆ, ಬ್ಲಾಕ್‌ಚೈನ್, ಡೇಟಾ ಅನಾಲಿಟಿಕ್ಸ್ ಮತ್ತು ಇಂಡಸ್ಟ್ರಿ 4.0 ಪರಿಹಾರಗಳ ಪ್ರವೇಶವನ್ನು ನೀಡುವ ಮೂಲಕ ಶಕ್ತಿಪಡಿಸುತ್ತದೆ.

ಕಾರ್ಯಾಗಾರಗಳು ಮತ್ತು ಸಹಭಾಗಿತ್ವಗಳ ಮೂಲಕ, ಅತೀ ಚಿಕ್ಕ ಉದ್ಯಮಗಳೂ ಸಹ ಭವಿಷ್ಯಕ್ಕೆ ತಯಾರಾದ, ಜಾಗತಿಕವಾಗಿ ಸ್ಪರ್ಧಾತ್ಮಕ ಮತ್ತು ಡಿಜಿಟಲ್ ಶಕ್ತಿಯುತ ಘಟಕಗಳಾಗಲು ಇದು ನೆರವಾಗುತ್ತದೆ.

**ಮಂಥನ್, ಎಫ್.ಕೆ.ಸಿ.ಸಿ.ಐ.ಯ ಪ್ರಮುಖ ಕಾರ್ಯಕ್ರಮಗಳಲ್ಲಿ ಒಂದಾದ ವಾರ್ಷಿಕ ಬಿಸಿನೆಸ್ ಪ್ಲಾನ್ ಪ್ರೆಸೆಂಟೇಶನ್ ಸ್ಪರ್ಧೆಯು** ಈಗ 18ನೇ ಆವೃತ್ತಿಗೆ ತಲುಪಿದೆ.

ಮಂಥನ್ ಯುವ ಮನಸ್ಸುಗಳಲ್ಲಿ ಉದ್ಯಮಶೀಲ ಮನೋಭಾವವನ್ನು ಉತ್ತೇಜಿಸಲು ವಿನ್ಯಾಸಗೊಳಿಸಲಾಗಿದೆ.

ಈ ಪ್ರಶಸ್ತಿ ಕಾರ್ಯಕ್ರಮದ ಮೂಲಕ, ಮಂಥನ್ ಕರ್ನಾಟಕದಾದ್ಯಂತ ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳನ್ನು ತಲುಪುತ್ತದೆ.

ಈ ವರ್ಷ, **ಎಫ್.ಕೆ.ಸಿ.ಸಿ.ಐ. ಸರ್ಕಾರದ ಕಾಲೇಜುಗಳ ವಿದ್ಯಾರ್ಥಿಗಳಿಗೆ ಸಹ ವಿಶೇಷ ಗುರುತಿನ ಪ್ರಶಸ್ತಿಯನ್ನು ನೀಡುವ ಯೋಜನೆಯನ್ನು ಕೈಗೊಂಡಿದೆ.**

ಎಫ್.ಕೆ.ಸಿ.ಸಿ.ಐ. ರಾಜ್ಯಾದ್ಯಂತ ಸರ್ಕಾರಿ ಕಾಲೇಜುಗಳನ್ನು ಕೈಗಾರಿಕಾ-ಸಂಬಂಧಿತ ತರಬೇತಿ, ಮಾರ್ಗದರ್ಶನ, ಇನ್‌ಕ್ಯುಬೇಶನ್ ಮತ್ತು ಉದ್ಯಮಶೀಲತೆಯನ್ನು ಉತ್ತೇಜಿಸುವ ಕೇಂದ್ರಗಳಾಗಿ ಪರಿವರ್ತಿಸಲು ರೋಡ್‌ಮ್ಯಾಪ್ ರೂಪಿಸಲು ಮುಂದಾಗಿದೆ.

ಈ ಕಾರ್ಯಕ್ರಮವು ಶೈಕ್ಷಣಿಕ ಕ್ಷೇತ್ರವನ್ನು ಭವಿಷ್ಯದಲ್ಲಿ ಕೌಶಲ್ಯಪೂರ್ಣ ಯುವಕರನ್ನು ಹೊಂದುವ ಕೈಗಾರಿಕೆಗಳೊಂದಿಗೆ ಸಂಪರ್ಕಿಸುವ ಸೇತುವೆಯಾಗಿರುತ್ತದೆ.

## ಪ್ರಮುಖ ಕಾರ್ಯಕ್ರಮಗಳು

ನಮ್ಮ ಕಾರ್ಯಕ್ರಮಗಳು ಪ್ರಭಾವ ಮತ್ತು ಪ್ರೇರಣೆಯ ಎಂಜಿನ್‌ಗಳಾಗುತ್ತವೆ:

i. **ಟ್ರೇಡ್ ಶೋಗಳು**
- ಎಂ.ಎಸ್.ಎಂ.ಇ. ಸಮಾವೇಶ (ಕಾನ್‌ಕ್ಲೇವ್‌ಗಳು)
- ಸಿ.ಎಸ್.ಆರ್. & ಸುಸ್ಥಿರತೆ
- ಕೃಷಿ ಟೆಕ್ ಎಕ್ಸ್‌ಪೊ
- ಪ್ರವಾಸೋದ್ಯಮ

ii. **ಸಂವಾದಗಳು ಮತ್ತು ಸಂಭಾಷಣೆಗಳು**
- ಸಂಸ್ಥಾಪಕರ ದಿನ ಸ್ಮಾರಕ ಉಪನ್ಯಾಸಗಳು
- ಸರ್ ಎಂ.ವಿ. ಸಂವಾದಗಳು

iii. **ಪ್ರಶಸ್ತಿಗಳು ಮತ್ತು ಗೌರವಗಳು**
- ಸರ್ ಎಂ. ವಿಶ್ವೇಶ್ವರಯ್ಯ ಸ್ಮಾರಕ ಪ್ರಶಸ್ತಿ
- ರಫ್ತು ಶ್ರೇಷ್ಠತಾ ಪ್ರಶಸ್ತಿ
- ಎಂ.ಎಸ್.ಎಂ.ಇ. ಪ್ರಶಸ್ತಿಗಳು
- ಮಹಿಳಾ ಉದ್ಯಮಿ ಪ್ರಶಸ್ತಿಗಳು

iv. **ಅಂತರರಾಷ್ಟ್ರೀಯ ವ್ಯಾಪಾರ ನಿಯೋಗಗಳು & ಬಿ2ಬಿ ಅಧಿವೇಶನಗಳು**

ಮತ್ತು ಇತರ ವೇದಿಕೆಗಳನ್ನು ಆಲೋಚನೆಗಳು, ಸಹಭಾಗಿತ್ವ ಮತ್ತು ಬ್ರಾಂಡ್ ರೂಪಾಂತರದ ವೇದಿಕೆಗಳಾಗಿ ಮರು ರೂಪಗೊಳಿಸಲಾಗುತ್ತದೆ, ಇದು ಉದ್ಯಮಗಳು, ವ್ಯವಹಾರಗಳು ಮತ್ತು ಕರ್ನಾಟಕದ ಆತ್ಮವನ್ನು ಆಚರಿಸುತ್ತದೆ.

## ಸದಸ್ಯರಿಗೆ ಸೇವೆಗಳು

ಸದಸ್ಯರು ಎಫ್.ಕೆ.ಸಿ.ಸಿ.ಐ.ನ ಹೃದಯವಾಗಿದ್ದಾರೆ. ನಾವು ವಕಾಲತೆಯನ್ನು ವಿಸ್ತರಿಸುತ್ತೇವೆ, ದೂರು ನಿವಾರಣೆ ವ್ಯವಸ್ಥೆಗಳನ್ನು ಪ್ರತಿಕ್ರಿಯಾತ್ಮಕಗೊಳಿಸುತ್ತೇವೆ ಮತ್ತು ಮಾರ್ಗದರ್ಶನ ಜಾಲಗಳನ್ನು ಬಲಪಡಿಸುತ್ತೇವೆ. ನೀತಿಯಿಂದ ವ್ಯವಹಾರ ಮಾರ್ಗದರ್ಶನದವರೆಗೆ, ಎಫ್.ಕೆ.ಸಿ.ಸಿ.ಐ. ಪ್ರತಿಯೊಬ್ಬ ಉದ್ಯಮಿಯ ವಿಶ್ವಾಸಾರ್ಹ ಪಾಲುದಾರನಾಗಿ ಸೇವೆ ಸಲ್ಲಿಸುತ್ತದೆ. ಸದಸ್ಯತ್ವವು ಕೇವಲ ಒಂದು ಪದವಿ ಮಾತ್ರವಲ್ಲ, ಸಬಲೀಕರಣ, ರಕ್ಷಣೆ ಮತ್ತು ಮೊಬೈಲ್ ಅಪ್ಲಿಕೇಶನ್ ಮತ್ತು ಬಿ2ಬಿ ಮಾರಾಟಗಾರರ ಅಭಿವೃದ್ಧಿಯನ್ನು ಒದಗಿಸುವ ಅಪರಿಮಿತ ಅವಕಾಶಗಳಿಗೆ ಪಾಸ್‌ಪೋರ್ಟ್ ಎಂದು ಖಚಿತಪಡಿಸುತ್ತದೆ.

ಎಫ್.ಕೆ.ಸಿ.ಸಿ.ಐ. ತನ್ನ ಮೌಲ್ಯಯುತ ಸದಸ್ಯರಿಗಾಗಿ ವಿಶೇಷ ಕಾರ್ಯಕ್ರಮವಾದ ಸದಸ್ಯರ ದಿನವನ್ನು ಆಯೋಜಿಸುತ್ತದೆ. ಎಫ್.ಕೆ.ಸಿ.ಸಿ.ಐ. ವಿಶೇಷ ಸದಸ್ಯತ್ವ ಡ್ರೈವ್‌ಗಳು ಮತ್ತು ನಾವೀನ್ಯತೆ ಕೇಂದ್ರಿತ ತೊಡಗಿಸಿಕೊಳ್ಳುವ ವೇದಿಕೆಗಳ ಮೂಲಕ ಯುವಜನರು ಮತ್ತು ನವೋದ್ಯಮಗಳ ಭಾಗವಹಿಸುವಿಕೆಯನ್ನು ಬಲಪಡಿಸುತ್ತದೆ.

## ಮಹಿಳಾ ಉದ್ಯಮಿಗಳು

ಮಹಿಳಾ ಉದ್ಯಮಿಗಳನ್ನು ಸಬಲಗೊಳಿಸುವುದು ರಾಷ್ಟ್ರ ನಿರ್ಮಾಣದ ಶುದ್ಧ ಸ್ವರೂಪವಾಗಿದೆ. ಉತ್ಪಾದನೆ, ವ್ಯಾಪಾರ ಮತ್ತು ಸೇವೆಗಳ ಕ್ಷೇತ್ರದಲ್ಲಿ ಮಹಿಳಾ ಉದ್ಯಮಿಗಳನ್ನು ಉತ್ತೇಜಿಸುವ ಮೂಲಕ, ಎಫ್.ಕೆ.ಸಿ.ಸಿ.ಐ. ಜಿ.ಡಿ.ಪಿ. ವೃದ್ಧಿಗೆ ಸಹಕಾರ ನೀಡುತ್ತದೆ, ಕೈಗಾರಿಕೆಗಳನ್ನು ವೈವಿಧ್ಯಗೊಳಿಸುತ್ತದೆ ಮತ್ತು ಒಳಗೊಳ್ಳುವಿಕೆಯನ್ನು ಉತ್ತೇಜಿಸುತ್ತದೆ. ಸಮರ್ಪಿತ ವೇದಿಕೆಗಳು, ಹಣಕಾಸು ಪ್ರವೇಶ, ಮಾರ್ಗದರ್ಶನ ಮತ್ತು ನಾಯಕತ್ವದ ಅವಕಾಶಗಳ ಮೂಲಕ ಮಹಿಳೆಯರು ಮುನ್ನಡೆಸುವ ಈ ಚಳುವಳಿ ಸಮಾನ ಮತ್ತು ನ್ಯಾಯಯುತ ಸಮಾಜವನ್ನು ನಿರ್ಮಿಸುತ್ತದೆ.

ಪ್ರತಿ ವರ್ಷ, **ಎಫ್.ಕೆ.ಸಿ.ಸಿ.ಐ. ಅಂತರರಾಷ್ಟ್ರೀಯ ಮಹಿಳಾ ಉದ್ಯಮಿಗಳ ದಿನ ಮತ್ತು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಗಳನ್ನು ಹೆಮ್ಮೆಯಿಂದ ಆಯೋಜಿಸುತ್ತದೆ ಮತ್ತು ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರ ಅಸಾಧಾರಣ ಕೊಡುಗೆಗಳನ್ನು ಗುರುತಿಸಿ ಗೌರವಿಸುತ್ತದೆ.**

## ಪ್ರಮಾಣೀಕೃತ ಶ್ರೇಷ್ಠತೆಯ ಮೂಲಕ ನಂಬಿಕೆಯನ್ನು ವೃದ್ಧಿಸುವುದು

**ಎಫ್.ಕೆ.ಸಿ.ಸಿ.ಐ. ಅಂತರರಾಷ್ಟ್ರೀಯ ಐ.ಎಸ್.ಓ. ಮಾನದಂಡಗಳನ್ನು ಅಳವಡಿಸಿಕೊಳ್ಳಲು ಬದ್ಧವಾಗಿದೆ.** ಇವು ಪಾರದರ್ಶಕತೆ, ಕಾರ್ಯಕ್ಷಮತೆ ಮತ್ತು ಸೇವಾ ಶ್ರೇಷ್ಠತೆಯನ್ನು ಖಚಿತಪಡಿಸುತ್ತದೆ. ಐ.ಎಸ್.ಓ. ಮಾನದಂಡಗಳನ್ನು ನಮ್ಮ ಕಾರ್ಯಾಚರಣೆಯ ಭಾಗವನ್ನಾಗಿ ಮಾಡುವ ಮೂಲಕ, ನಾವು ಆಡಳಿತ ವ್ಯವಸ್ಥೆಯನ್ನು ಬಲಪಡಿಸುತ್ತೇವೆ, ಸದಸ್ಯರ ತೃಪ್ತಿಯನ್ನು ಹೆಚ್ಚಿಸುತ್ತೇವೆ ಮತ್ತು ಎಫ್.ಕೆ.ಸಿ.ಸಿ.ಐ. ಅನ್ನು ಜಾಗತಿಕ ಮಟ್ಟದ ವಿಶ್ವಾಸಾರ್ಹ ವಾಣಿಜ್ಯ ಮಂಡಳಿಯಾಗಿ ಸ್ಥಾಪಿಸುತ್ತೇವೆ.

ಒಂದು ಮಹಾಸಂಸ್ಥೆಯಾಗಿ, ಎಫ್.ಕೆ.ಸಿ.ಸಿ.ಐ. ತನ್ನ ಸಮಗ್ರ ಉದ್ದೇಶಗಳನ್ನು ಸಾಧಿಸಲು, ಪ್ರಾದೇಶಿಕ ತೊಡಗಿಸಿಕೊಳ್ಳುವಿಕೆಯನ್ನು ಉತ್ತೇಜಿಸಲು ಮತ್ತು ಸಾಂಸ್ಥಿಕ ಶ್ರೇಷ್ಠತೆ ಮತ್ತು ಉತ್ತಮ ಅಭ್ಯಾಸಗಳ ಪ್ರಯೋಜನಗಳು ಕರ್ನಾಟಕದ ಪ್ರತಿಯೊಂದು ಭಾಗಕ್ಕೂ ತಲುಪುವುದನ್ನು ಖಚಿತಪಡಿಸಿಕೊಳ್ಳಲು **ಎಲ್ಲಾ ಜಿಲ್ಲಾ ಸಂಸ್ಥೆಗಳು ಮತ್ತು ವಲಯವಾರು ಸಂಸ್ಥೆಗಳೊಂದಿಗೆ ನಿಕಟವಾಗಿ ಕೆಲಸ ಮಾಡುತ್ತದೆ.**

**ಒಟ್ಟಾಗಿ, ನಾವು ಆಕಾಂಕ್ಷೆಯನ್ನು ಸಾಧನೆಯಾಗಿ ರೂಪಿಸೋಣ ಮತ್ತು ಎಫ್.ಕೆ.ಸಿ.ಸಿ.ಐ.ಯನ್ನು ಕರ್ನಾಟಕದ, ಭಾರತದ ಮತ್ತು ಜಗತ್ತಿನ ಹೆಮ್ಮೆಯನ್ನಾಗಿಸೋಣ.**

> ನಾನು ಸಂಸ್ಥೆಯ ಅಧಿಕಾರವನ್ನು ವಹಿಸಿಕೊಂಡಿದ್ದು, ಇತಿಹಾಸದ ಭರವಸೆಗಳನ್ನು ಮತ್ತು ಭವಿಷ್ಯದ ವಾಗ್ದಾನವನ್ನು ಹೊತ್ತಿದ್ದೇನೆ. ಒಟ್ಟಾಗಿ, ನಾವು ಎಫ್.ಕೆ.ಸಿ.ಸಿ.ಐ. ಅನ್ನು ಕರ್ನಾಟಕದ ಹೆಮ್ಮೆಯನ್ನಾಗಿ ಮಾಡುವುದಲ್ಲದೇ, ಎಲ್ಲರನ್ನೂ ಒಳಗೊಳ್ಳುವ, ನವೀನ ಮತ್ತು ಪ್ರಭಾವಶಾಲಿ ಫಲಿತಾಂಶಗಳನ್ನು ಹೊಂದುವ ಜಾಗತಿಕ ಮಾನದಂಡವನ್ನಾಗಿ ಮಾಡುತ್ತೇವೆ.
>
> **ಉಮಾ ರೆಡ್ಡಿ**
> ಅಧ್ಯಕ್ಷೆ, ಎಫ್.ಕೆ.ಸಿ.ಸಿ.ಐ.

# ಎಫ್.ಕೆ.ಸಿ.ಸಿ.ಐ. – ಒಂದು ಟ್ರಿಲಿಯನ್ ಡಾಲರ್ ಕರ್ನಾಟಕದ ಪ್ರೇರಕ ಶಕ್ತಿ

ಕರ್ನಾಟಕದ $1 ಟ್ರಿಲಿಯನ್ ಆರ್ಥಿಕತೆಯ ಕನಸು ಎಫ್.ಕೆ.ಸಿ.ಸಿ.ಐ.ಯ ನಾಯಕತ್ವದಲ್ಲಿ ಮಾತ್ರ ಸಾಕಾರಗೊಳ್ಳಬಹುದು. ಏಕೆಂದರೆ ಎಫ್.ಕೆ.ಸಿ.ಸಿ.ಐ. ವ್ಯಾಪಾರ, ಕೈಗಾರಿಕೆ ಮತ್ತು ಸೇವೆಗಳ ಸಂಪೂರ್ಣ ಪರಿಧಿಯನ್ನು ಪ್ರಾಮಾಣಿಕತೆ ಮತ್ತು ಆಳವಾದ ಬದ್ಧತೆಯೊಂದಿಗೆ ಪ್ರತಿನಿಧಿಸುತ್ತದೆ. ಇದು ರಾಜ್ಯದ ವ್ಯಾವಹಾರಿಕ ಸಮುದಾಯದ ಧ್ವನಿ.

ಎಂ.ಎಸ್.ಎಂ.ಇ.ಗಳ ಆಶ್ರಯಿತ ಸಂಸ್ಥೆಯಾಗಿ, ಇದು ಯುವ ಉದ್ಯಮಿಗಳ ಆಕಾಂಕ್ಷೆಗಳನ್ನು ಸಂಪರ್ಕಿಸುತ್ತದೆ. ಅವರಲ್ಲಿ ಉತ್ಸಾಹ, ದೃಷ್ಟಿಕೋನ ಮತ್ತು ಪರಿವರ್ತನೆಯ ಮನೋಭಾವವನ್ನು ಉತ್ತೇಜಿಸುತ್ತದೆ.

ನೀತಿ ಮತ್ತು ಆಚರಣೆಯ ಹಾಗೂ ದೃಷ್ಟಿಕೋನ ಮತ್ತು ಅನುಷ್ಠಾನಗಳ ನಡುವಣ ಸೇತುವೆಯಾಗಿ ಎಫ್.ಕೆ.ಸಿ.ಸಿ.ಐ.ನ ಅಪ್ರತಿಮ ಪಾತ್ರವನ್ನು ಸರ್ಕಾರಗಳು ಗುರುತಿಸಿವೆ. ಉದ್ಯಮಿಗಳಿಗೆ ಅವಕಾಶಗಳನ್ನು ಪೂರೈಸುವ, ನೀತಿ-ನಿಯಂತ್ರಣಗಳ ವಾಸ್ತವತೆಯನ್ನು ತಿಳಿಸುವ ಮತ್ತು ಕನಸುಗಳು ದಿಕ್ಕನ್ನು ಕಂಡುಕೊಳ್ಳುವ ಕೇಂದ್ರೀಕೃತ ವ್ಯವಸ್ಥೆಯಾಗಿ ಎಫ್.ಕೆ.ಸಿ.ಸಿ.ಐ. ಕಾರ್ಯನಿರ್ವಹಿಸುತ್ತಿದೆ.

ಕರ್ನಾಟಕವು $1 ಟ್ರಿಲಿಯನ್ ಆರ್ಥಿಕ ಶಕ್ತಿಯತ್ತ ಧಾವಿಸಲು, ಭಾರತದ **'ವಿಕಸಿತ ಭಾರತ 2047'** – $4 ಟ್ರಿಲಿಯನ್ ಆರ್ಥಿಕತೆಯ ದೃಷ್ಟಿಕೋನವನ್ನು ಬೆಂಬಲಿಸಬೇಕಿದ್ದು, ಈ ಐತಿಹಾಸಿಕ ಕಾರ್ಯಾಚರಣೆಯಲ್ಲಿ ಎಫ್.ಕೆ.ಸಿ.ಸಿ.ಐ.ಯನ್ನು ಒಂದು ಪ್ರಮುಖ ಪಾಲುದಾರನಾಗಿ ಮಾಡಬೇಕಿದೆ.

## ಎಫ್.ಕೆ.ಸಿ.ಸಿ.ಐ. – ಕರ್ನಾಟಕದ ಆರ್ಥಿಕ ವೃದ್ಧಿ ಮತ್ತು ಕೈಗಾರಿಕಾ ಶಕ್ತಿಯ ಕೇಂದ್ರಬಿಂದು

ಎಫ್.ಕೆ.ಸಿ.ಸಿ.ಐ. ಕೇವಲ ಒಂದು ಸಂಸ್ಥೆಯಲ್ಲ; ಅದು ಆರ್ಥಿಕ ಶಕ್ತಿ ಕೇಂದ್ರ. 5000 ಕ್ಕೂ ಹೆಚ್ಚು ನೇರ ಸದಸ್ಯರು ಮತ್ತು ಎರಡು ಲಕ್ಷಕ್ಕೂ ಹೆಚ್ಚು ಪರೋಕ್ಷ ಸದಸ್ಯರು ಎಫ್.ಕೆ.ಸಿ.ಸಿ.ಐ.ಯ ಭಾಗವಾಗಿದ್ದಾರೆ.

ಪ್ರತಿಯೊಬ್ಬ ಸದಸ್ಯರು ವರ್ಷಕ್ಕೆ ಸರಾಸರಿ 25 ಲಕ್ಷ ರೂಪಾಯಿಗಳ ಹೂಡಿಕೆ ಮಾಡುವುದರಿಂದ, ಒಟ್ಟು ಹೂಡಿಕೆಯ ಮೊತ್ತ ಸುಮಾರು 50,000 ಕೋಟಿ ರೂಪಾಯಿಗಳಷ್ಟಾಗಿದೆ. ಇದು ಕೇವಲ ಹೂಡಿಕೆ ಅಲ್ಲ; ಇದು ಕರ್ನಾಟಕದ ಕೈಗಾರಿಕೆ, ವ್ಯಾಪಾರ ಮತ್ತು ಸೇವೆಗಳಿಗೆ ಜೀವದಾನ ನೀಡುವ ಶಕ್ತಿ.

ಸಂಖ್ಯೆಗಳನ್ನು ಮೀರಿ ಹೇಳುವುದಾದರೆ, ಎಫ್.ಕೆ.ಸಿ.ಸಿ.ಐ. ಒಂದು ಉದ್ಯೋಗ ಸೃಷ್ಟಿಕರ್ತ ಸಂಸ್ಥೆಯಾಗಿದ್ದು, ಭಾರತದ ಅತಿದೊಡ್ಡ ನಿಗಮಗಳಿಗೆ ಪ್ರತಿಸ್ಪರ್ಧಿಯಾಗಿ, ಎಂ.ಎಸ್.ಎಂ.ಇ. ವಲಯದಲ್ಲಿ ದೃಢವಾಗಿ ಬೇರೂರಿದೆ. ಪ್ರತಿಯೊಂದು ಸಣ್ಣ ಘಟಕ, ಪ್ರತಿಯೊಬ್ಬ ವ್ಯಾಪಾರಿ, ಪ್ರತಿಯೊಬ್ಬ ಉದ್ಯಮಿ ಈ ಅಸಾಧಾರಣ ಪರಿಸರ ವ್ಯವಸ್ಥೆಗೆ ಕೊಡುಗೆ ನೀಡುತ್ತಾರೆ. ಇದೊಂದು ಕಾಣದ ಆರ್ಥಿಕತೆಯಾಗಿದ್ದು, ಮೌನ ಕಾರ್ಯಪಡೆ ಹಾಗೂ ಎಂದಿಗೂ ನಿಲ್ಲದ ನಿರಂತರ ಎಂಜಿನ್‌ಅನ್ನು ಹೊಂದಿದೆ. ಎಫ್.ಕೆ.ಸಿ.ಸಿ.ಐ. ಆ ಶಕ್ತಿಯನ್ನು ಸಾಕಾರಗೊಳಿಸುವುದರ ಜೊತೆಗೆ ಸ್ಥಿತಿಸ್ಥಾಪಕ, ಕ್ರಿಯಾತ್ಮಕ ಮತ್ತು ಭವಿಷ್ಯಕ್ಕೆ ಸಿದ್ಧವಾದ ಒಂದು ಸಂಸ್ಥೆಯಾಗಿದೆ. ಎಫ್.ಕೆ.ಸಿ.ಸಿ.ಐ. ಕರ್ನಾಟಕದ ಆರ್ಥಿಕ ನಾಡಿಯ ಹೃದಯವಾಗಿದೆ.



ಫೆಡರೇಶನ್ ಹೌಸ್, ಕೆಂಪೇಗೌಡ ರಸ್ತೆ
ಬೆಂಗಳೂರು – 560 009
ದೂ: 080 22262355/56 | ಇ: president@fkcci.in
ವೆ: www.fkcci.org